5. ಮಾನವ ಸಂಪನ್ಮೂಲ ಅಭಿವೃದ್ಧಿ

6. ಐಎಸ್‌ಒ–9000, ಐಎಸ್‌ಒ –14000 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು.

ಕೈಗಾರಿಕೆಗಳಿಗೆ ಸಹಕಾರಿಯಾಗಲು ಜಾಗೃತಿ ಶಿಬಿರಗಳು ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು ಡಬ್ಲ್ಯೂ ಟಿ.ಒ. ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ನಡೆಸಲಾಗುತ್ತದೆ.

ರಾಜ್ಯದ ಸಣ್ಣ ಕೈಗಾರಿಕೆಗಳಿಂದ ಸರ್ಕಾರದ ಇಲಾಖೆಗಳು ಹಾಗೂ ನಿಗಮಗಳು ವಸ್ತುಗಳನ್ನು ಖರೀದಿಸುವಾಗ ಬೆಲೆಯಲ್ಲಿ ಶೇಖಡಾ 15ರಷ್ಟು ಆದ್ಯತೆ ಹಾಗೂ ಖರೀದಿಯಲ್ಲಿ ಶೇ 75 ರಷ್ಟು ಆದ್ಯತೆ ನೀಡಲು ಅವಕಾಶವನ್ನು ಸರ್ಕಾರದ ಆದೇಶ ಸಂಖ್ಯೆ:ಸಿಐ:167 ಎಸ್‌ಪಿಐ:2001 ದಿನಾಂಕ:30.6.2001 ಹಾಗೂ 20.5.2002 ಸರ್ಕಾರದ ಅಧಿಸೂಚನೆ ಸಂಖ್ಯೆ:ಎಫ್‌ಡಿ:ಪಿಡಬ್ಲ್ಯೂಡಿ: 389 ಎಫ್‌ಸಿ 3–2001 ದಿನಾಂಕ:30.8.2001 ಮತ್ತು ಸುತ್ತೋಲೆ ದಿನಾಂಕ: 30.1.02 ರಂತೆ ಕಲ್ಪಿಸಲಾಗಿದೆ.

ಇ) 150 ಕೆ.ವಿ.ಎ. ವರೆಗಿನ ವಿದ್ಯುತ್‌ಚ್ಛಕ್ತಿ ಉತ್ಪಾದಿಸುವ ಡಿ.ಜಿ.ಸೆಟ್ ಹೊಂದಿರುವ ಘಟಕಗಳನ್ನು ವಿದ್ಯುತ್‌ಚ್ಛಕ್ತಿ ತೆರಿಗೆಯಿಂದ ಈಗಾಗಲೇ ವಿನಾಯ್ತಿ ನೀಡಲಾಗಿದೆ. ಇದರ ಪ್ರಯೋಜನವನ್ನು ಪ್ರಮುಖವಾದ ಸಣ್ಣ ಕೈಗಾರಿಕಾ ಘಟಕಗಳಿಗೆ ನೀಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯ ಪ್ರಾರಂಭ

287 (236): ಶ್ರೀ ಯೋಗೀಶ್‌ಭಟ್ ಎನ್. (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷ ಆರ್ಥಿಕ ವಲಯ ಯೋಜನೆ ಯಾವಾಗ ಆರಂಭ ಮಾಡಲಾಗುವುದು; ಇಷ್ಟಕ್ಕೆ ತಗಲುವ ವೆಚ್ಚ ವೆಷ್ಟು; ಬಂಡವಾಳ ಆಕರ್ಷಿಸಲು ಕೈಗೊಂಡ ಕ್ರಮಗಳು ಈ ಯೋಜನೆಯ ವಿವರಗಳು ಹಾಗೂ ಪ್ರಸ್ತುತ ಸ್ಥಿತಿಗತಿಗಳೇನು;

ಆ) ಕರಾವಳಿ ಜಿಲ್ಲೆಗಳಲ್ಲಿ ಯಾವ ಹೊಸ ಯೋಜನೆ ಆರಂಭವಾಗಲಿರುವುದು; ಎಷ್ಟು ದೇಶೀ, ವಿದೇಶಿ ಸಂಸ್ಥೆಗಳು ಕೈಗಾರಿಕಾ ಬಂಡವಾಳ ಹೂಡಲು ವ್ಯಕ್ತರಾಗಿದ್ದಾರೆ; ಒಪ್ಪಂದಕ್ಕೆ ಸಹಿ ಹಾಕಿದ ಸಂಸ್ಥೆಗಳು ಯಾವುವು; ಹಾಗೂ ಇದರ ಪೂರ್ವ ವಿವರ ತಿಳಿಸುವುದು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಕೆನರಾ ಚೇಂಬರ್ ಆಫ್ ಕಾಮರ್ಸ್ ಮಂಗಳೂರು, ರವರು ಕರ್ನಾಟಕ ಕರಾವಳಿ ಪ್ರದೇಶದಲ್ಲಿ ಒಂದು ಕರಾವಳಿ ವಿಶೇಷ ಆರ್ಥಿಕ ವಲಯ ಸ್ಥಾಪನೆಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮಂತ್ರಾಲಯಕ್ಕೆ ಶಿಫಾರಸ್ಸು ಮಾಡಿತ್ತು.

ರಾಜ್ಯ ಸರ್ಕಾರದ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರವು ಸಹ ವರದಿ ಯೋಜನೆಗೆ ತಾತ್ವಿಕ ಮಂಜೂರಾತಿಯನ್ನು ನೀಡಿದೆ.

ಕೆನರಾ ವಾಣಿಜ್ಯ ಸಂಘವು ಪ್ರಸ್ತಾವನೆಯಂತೆ ಯೋಜನೆ ಒಟ್ಟು ವೆಚ್ಚ 2120 ಕೋಟಿ ಆಗಿದ್ದು ಯೋಜನೆಯನ್ನು 3 ಸ್ಥಳದಲ್ಲಿ ಅಂದರೆ ಬೈಕಂ ಪಾಡಿ, ಪಡುಬಿದ್ರಿ (ಉಡುಪಿ ಜಿಲ್ಲೆ)

ಅಗಸೂರು (ಉತ್ತರ ಕನ್ನಡ ಜಿಲ್ಲೆ) ಸ್ಥಾಪಿಸಲು ಉದ್ದೇಶಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರವು ಬೈಕಂಪಾಡಿ ಪ್ರದೇಶದಲ್ಲಿ ಸ್ಥಾಪಿಸಲು ಅನುಮೋದನೆ ನೀಡಿದೆ.

ಮೇಲ್ಕಂಡ ಯೋಜನೆಯನ್ನು ಖಾಸಗಿ ಬಂಡವಾಳದಾರರ ಮುಖಾಂತರ ಕಾರ್ಯಗತಗೊಳಿಸಲು ಉದ್ದೇಶಿಸಿರುವುದರಿಂದ ರಾಜ್ಯ ಸರ್ಕಾರವು ಕೆನರಾ ವಾಣಿಜ್ಯ ಸಂಘದ ಸಹಯೋಗದೊಂದಿಗೆ ಅರ್ಹ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಗುರುತಿಸಲು ಕ್ರಮ ಕೈಗೊಂಡಿದೆ.

ಆ) ಕರಾವಳಿ ಜಿಲ್ಲೆಯಲ್ಲಿ ಕಳೆದ ತಿಂಗಳು ನಡೆದ ಸಮಾವೇಶದಲ್ಲಿ 66 ಪ ದೇಶಿ ಕಂಪೆನಿಗಳಿಗೆ ರೂ. 5690.93 ಕೋಟಿಗಳ ಬಂಡವಾಳ ಹೂಡಲು ಸ್ವೀಕೃತವಾಗಿರುತ್ತವೆ. ಈ ಪೈಕಿ 4 ಕಂಪೆನಿಗಳು ಒಪ್ಪಂದಕ್ಕೆ ಸಹಿ ಹಾಕಿರುತ್ತದೆ. ಅವುಗಳು ಈ ಕೆಳಗಿನಂತಿವೆ:

1. ಆರ್ಕೆಡಿಯಾ ಶಿಪಿಂಗ್ ಲಿ: – ಮಲ್ಪೆಯಲ್ಲಿ ಮೈನರ್ ಪೋರ್ಟ್ – ರೂ. 75–00 ಕೋಟಿ
2. ಜಿಂದಾಲ್ ವಿಜಯನಗರ ಸ್ಟೀಲ್ಸ್ ಲಿಮಿಟೆಡ್ – ಕಾರವಾರ ಪೋರ್ಟ್ ಬೆಳವಣಿಗೆ – ರೂ. 455–00 ಕೋಟಿ
3. ಜಿ.ಕೆ. ಸಿಮೆಂಟ್ಸ್ ಲಿ ಕಾರವಾರದಲ್ಲಿ ವೈಟ್ ಸಿಮೆಂಟ್ ಘಟಕ ಸ್ಥಾಪಿಸಲು – ರೂ 125–00 ಕೋಟಿ
4. ಕೈರಾಲಿ ಹೆಲ್ತ್ ರಸಾರ್ಟ್ – ಕಾರವಾರದಲ್ಲಿ ಹೆಲ್ತ್ ರೆಸಾರ್ಟ್ ಸ್ಥಾಪಿಸಲು – ರೂ. 3–00 ಕೋಟಿ

ಇದರಲ್ಲಿ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿಯು 24 ಯೋಜನೆಗಳಿಗೆ ರೂ. 6.91 ಕೋಟಿಗಳ ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿರುತ್ತದೆ.

ಖಾಸಗಿ ಸಂಸ್ಥೆಗಳಿಗೆ ಹಾಸ್ಟೆಲ್ ನಿರ್ವಹಣೆಯನ್ನು ಹಸ್ತಾಂತರಿಸುವುದು

288 (237): ಶ್ರೀ ಯೋಗೀಶ್‌ಭಟ್ ಎನ್. (ಮಂಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಿದ್ಯಾರ್ಥಿ ನಿಲಯಗಳ ನಿರ್ವಹಣೆಯನ್ನು ಖಾಸಗೀ ಸಂಸ್ಥೆಗಳಿಗೆ ವಹಿಸಲು ಸರ್ಕಾರ ನಿರ್ದರಿಸಿದೆಯೇ:

ಆ) ಈ ತೀರ್ಮಾನಕ್ಕೆ ಕಾರಣವೇನು: ಇದು ಯಾವಾಗಿನಿಂದ ಅನ್ವಯವಾಗುತ್ತದೆ:

ಇ) ಹಾಲಿ ಇರುವ ಮೇಲ್ವಿಚಾರಕರ ಸೇವೆಯನ್ನು ಯಾವ ರೀತಿ ಪಡೆಯಲಾಗುತ್ತದೆ:

ಈ) ಇಂತಹ ಹಾಸ್ಟೆಲ್‌ಗಳ ಅಕ್ರಮ ಅವ್ಯವಸ್ಥೆ ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗುವುದು:

ಉ) ಖಾಸಗಿಯವರಿಗೆ ವಹಿಸುವುದಾದರೆ ಇಲಾಖೆಯಾದರೂ ಏಕೆ ಇರಬೇಕು ಎಂಬ ಆತಂಕ ಸರ್ಕಾರಕ್ಕುಂಟಾಗುವುದಿಲ್ಲವೇ: ವಿವರ ಒದಗಿಸುವುದು:

ಊ) ಮಂಗಳೂರಿಗೆ ಮಂಜೂರಾದ ವಿದ್ಯಾರ್ಥಿನಿಲಯ ಕಾಮಗಾರಿ ಯಾವಾಗ ಆರಂಭ ಮಾಡಲಾಗುವುದು?